ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ

ಆ) ಒಂದು ವಿಶಾಲವಾದ ಸಂಯುಂಕ್ತ ಒಳ ಚರಂಡಿ ಯೋಜನೆಯು ಪರಿಶೀಲನೆಯಲ್ಲಿದೆ.

ಇ) ಅಂದಾಜು ರೂ. ೨೦೦೦ ಲಕ್ಷಗಳು

ಈ) ಆಡಳಿತಾತ್ಮಕ ಅನುಮೋದನೆ ನೀಡಿದ ನಂತರ ೫ ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

ಮೈಸೂರು ನಗರದಲ್ಲಿರುವ ಪ್ರೌಢಶಾಲೆಗಳು ಜಿಲ್ಲಾ ಪರಿಷತ್ತಿಗೆ ಸೇರಿರುವ ಬಗ್ಗೆ

೧೨೪೯. ಶ್ರೀ ಹರ್ಷ ಕುಮಾರಗೌಡ (ಚಾಮರಾಜ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಮೈಸೂರು ನಗರದಲ್ಲಿರುವ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳು ಜಿಲ್ಲಾ ಪರಿಷತ್ತಿನ ಆಡಳಿತಕ್ಕೆ ಒಳಪಟ್ಟಿರುವುದು ಸರ್ಕಾರದವರಿಗೆ ತಿಳಿದಿದೆಯೇ.

ಆ) ಹಾಗಿದ್ದಲ್ಲಿ ಇವುಗಳ ಅಭಿವೃದ್ಧಿಯ ಬಗ್ಗೆ ಸ್ಥಳೀಯ ಜನ ಪ್ರತಿನಿಧಿಗಳು ಚರ್ಚಿಸಲು ಯಾವ ರೀತಿಯ ಅವಕಾಶ ಕಲ್ಪಿಸಲಾಗಿದೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು),—

ಅ) ತಿಳಿದಿದೆ.

ಆ) ಸ್ಥಳೀಯ ಜನ ಪ್ರತಿನಿಧಿಗಳು ಚರ್ಚಿಸಲು ಕಾನೂನಿನ ಪ್ರಕಾರ ಸಾಧ್ಯವಿಲ್ಲ.

ಶಾಲಾ ಮಾಧ್ಯಮಗಳಲ್ಲಿ ಡೊನೇಷನ್ ಹಾವಳಿ

೧೨೪೬. ಶ್ರೀ ಹರ್ಷ ಕುಮಾರ ಗೌಡ (ಚಾಮರಾಜ).—ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಶಾಲಾ ಮಾಧ್ಯಮಗಳಲ್ಲಿ ಅಕ್ರಮವಾಗಿ ಸಾರ್ವಜನಿಕರಿಂದ ಡೊನೇಷನ್ ಪಡೆಯುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ, ಇದರ ನಿಲುಗಡೆಗೆ ಸರಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ ;

ಇ) ಹಾಗಿದ್ದಲ್ಲಿ. ಎಷ್ಟು ಶಿಕ್ಷಣ ಸಂಸ್ಥೆಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಹೌದು.

ಆ) ಲಿಖಿತ ದೂರುಗಳು ಯಾವುವೂ ಬಂದಿರುವುದಿಲ್ಲ. ಆದುದರಿಂದ, ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.